ಕೃಷಿಮೇಳ 2021
ರೈತರ ಹಬ್ಬ
ಸ್ಥಾಪನೆ 1964
ಕೃಷಿಮೇಳ ಬುಲೆಟೀನ್ ★ 12ನೇ ನವೆಂಬರ್, 2021
ಕೃಷಿಮೇಳ–2021
ನವೆಂಬರ್ 11–14

ದ್ವಿತೀಯೇನ ಸಂಪದ್ಭರಿತ ಸಾಧನಂ ಎನ್ನುವಂತೆ ಕೃಷಿಮೇಳ ದ್ವಿತೀಯ ದಿನದ ಕಾರ್ಯಕ್ರಮವು ಅತ್ಯಂತ ವಿಸ್ರಂಭಣೆಯಿಂದ ನಡೆಯಿತು. ಸುಮಾರು 550 ಮಳಿಗೆಗಳಲ್ಲಿ ಮಾಹಿತಿ, ಪರಿಕರಗಳು ಮತ್ತು ಪ್ರಾತ್ಯಕ್ಷಿಕೆಗಳನ್ನು ಒಳಗೊಂಡಂತೆ ಬೆಂಗಳೂರು ಗ್ರಾಮಾಂತರ & ನಗರ ಹಾಗೂ ರಾಮನಗರ ಜಿಲ್ಲೆಗಳ ಕೃಷಿಯಲ್ಲಿ ಸಾಧನೆಗೈದ ರೈತ ಹಾಗೂ ರೈತ ಮಹಿಳೆಯರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿದ ಡಾ. ಎಸ್. ಎ. ಪಾಟೀಲ್, ಮಾಜಿ ಅಧ್ಯಕ್ಷರು, ಕೃಷಿ ಮಿಷನ್, ಕರ್ನಾಟಕ ಸರ್ಕಾರ ಇವರು ಮಾತನಾಡಿ ರೈತರು ಕೃಷಿಮೇಳದಲ್ಲಿ ಹೊಸ ತಂತ್ರಜ್ಞಾನಗಳನ್ನು ನೋಡಿ ಅಳವಡಿಸಿಕೊಂಡರೆ ಮಾತ್ರ ತಮ್ಮ ಆದಾಯವನ್ನು ದ್ವಿಗುಣಗೊಳಿಸಬಹುದು ಎಂದರು. ರೈತರು ಬೆಳೆಯನ್ನು ಬೆಳೆಯುವುದು ಅಲ್ಲದೆ ವ್ಯಾಪಾರಸ್ಥರು ಸಹ ಆಗಬೇಕು ಎಂದರು. ರೈತರು ಬೇಕಾದಷ್ಟು ಆಹಾರ ಬೆಳೆಗಳನ್ನು ಬೆಳೆದು ಹೆಚ್ಚು ವಾಣಿಜ್ಯ ಬೆಳೆಗಳನ್ನು ಬೆಳೆದು ಪ್ರತಿದಿನ ಆದಾಯ ಬರುವಂತೆ ನೋಡಿಕೊಳ್ಳಬೇಕೆಂದರು. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಡಾ. ಎಂ. ಎನ್. ಶೀಲವಂತರವರು ಮಾತನಾಡಿ ರೈತರಿಗೆ ಹಲವಾರು ಸಮಸ್ಯೆಗಳು ಇದ್ದು, ಕೃಷಿಯನ್ನು ಬೇರೆ ಉದ್ಯಮಕ್ಕೆ ಹೋಲಿಸುವುದು ಕಷ್ಟ. ರೈತರ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ತಾವು ಬೆಳೆದ ಉತನ್ನಗಳಿಗೆ ರೈತರೇ ಬೆಲೆಯನ್ನು ನಿರ್ಧರಿಸುವಂತಾಗಬೇಕು. ಪ್ರತಿ ವರ್ಷವು ಭೂಹಿಡುವಳಿಯು ಚಿಕ್ಕದಾಗುತ್ತಿದ್ದು, ಉತ್ಪಾದನೆಯು ಕಡಿಮೆಯಾಗುತ್ತಿದೆ. ಆದ್ದರಿಂದ ರೈತರು ಉತ್ಪಾದಕರ ಸಂಘಗಳನ್ನು ರಚಿಸುವಂತಾಗಬೇಕು. ರೈತರು ವಾಣಿಜ್ಯ ಬೆಳೆ ಬೆಳೆದು, ಬೆಳೆ ವಿಮೆಯನ್ನು ಕಡ್ಡಾಯವಾಗಿ ಮಾಡಿಸಬೇಕು ಹಾಗೂ ಸರ್ಕಾರವು ಶೇಖರಣೆಗೆ ಪ್ರಾಮುಖ್ಯತೆ ನೀಡಬೇಕಿದೆ ಎಂದರು.

## ಮೇಳದಲ್ಲಿ ಅನ್ನದಾತರಿಗೆ ಸನ್ಮಾನ



ಸಾಧಕರಿಗೆ ಗಣ್ಯರಿಂದ ಪ್ರಶಸ್ತಿ ಪ್ರದಾನ

ಕಾರ್ಯಕ್ರಮದ ಅತಿಥಿಗಳಾಗಿ ಭಾಗವಹಿಸಿದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಡಾ. ಕೆ. ನಾರಾಯಣಗೌಡರವರು, ರೈತರ ಆದಾಯವು ದ್ವಿಗುಣಗೊಳ್ಳಬೇಕಾದರೆ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕಾಗಿದೆ ಎಂದರು. ಪಶುಸಂಗೋಪನೆಯಲ್ಲಿ ಹಾಗೂ ಬೆಳೆಗಳ ಕೀಟ, ರೋಗದ ತಡೆಯುವಿಕೆ ಕುರಿತು ಇನ್ನು ಹೆಚ್ಚು ಸಂಶೋಧನೆ ಬೇಕಾಗಿದೆ ಎಂದರು. ಕೃಷಿಯ ಉತ್ಪಾದನೆ ಪೋಲಾಗುತ್ತಿರುವುದನ್ನು ತಡೆಯಬೇಕು. ರೈತರ ಸಂಘಟನೆಗೆ ಹೆಚ್ಚು ಒತ್ತು ಕೊಟ್ಟು ಗ್ರಾಮೀಣ ಮಟ್ಟದಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡುವ ಸಿದ್ಧತೆ ನಡೆಯಬೇಕಿದೆ ಎಂದು ರೈತರಿಗೆ ಕಿವಿಮಾತನ್ನು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಎಸ್. ರಾಜೇಂದ್ರ ಪ್ರಸಾದ್‌ರವರು ಪ್ರಶಸ್ತಿ ಪಡೆದ ಸಾಧಕರಿಗೆ ಅಭಿನಂದನೆಗಳನ್ನು ತಿಳಿಸಿದರು. ಕರೋನ ಹಾಗೂ ಮಳೆಯ ನಡುವೆಯೂ ಆಸಕ್ತಿವಹಿಸಿ ಭಾಗವಹಿಸಿದ ರೈತರಿಗೆ, ಸಾರ್ವಜನಿಕರಿಗೆ, ವಿಜ್ಞಾನಿಗಳಿಗೆ, ಖಾಸಗಿ ಹಾಗೂ ಸರ್ಕಾರದ ಇಲಾಖೆಗಳಿಗೆ ಧನ್ಯವಾದಗಳನ್ನು ತಿಳಿಸಿದರು. ಮೇಳವನ್ನು ವೀಕ್ಷಿಸಿ ಘೋಷವಾಕ್ಯದಂತೆ ಕೃಷಿಕರು ಆದಾಯವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಹೆಜ್ಜೆಯನ್ನು ಮುಂದಿಡಬೇಕೆಂದರು. ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಜಿ. ಶಿವನಗೌಡರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ರೈತರ ಕಾರ್ಯಕ್ರಮಕ್ಕೆ ಐದು ಲಕ್ಷದ ಆರ್ಥಿಕ ನೆರವು ನೀಡಿದರು. ವಿಶ್ವವಿದ್ಯಾನಿಲಯದ ಶಿಕ್ಷಣ ನಿರ್ದೇಶಕರಾದ ಡಾ. ಕೆ. ಸಿ. ನಾರಾಯಣಸ್ವಾಮಿ, ವಿಸ್ತರಣಾ ನಿರ್ದೇಶಕರಾದ ಡಾ. ಎನ್. ದೇವಕುಮಾರ್, ಸಂಶೋಧನಾ ನಿರ್ದೇಶಕರಾದ ಡಾ. ವೈ.ಜಿ. ಷಡಾಕ್ಷರಿ ಮತ್ತು ಡೀನ್‌ರಾದ ಡಾ. ಎನ್. ಬಿ. ಪ್ರಕಾಶ್ ಉಪಸ್ಥಿತರಿದ್ದರು.


ರೈತರ ಹಬ್ಬದಲ್ಲಿ ಶುಕ್ರವಾರದಂದು ಕೃಷಿಕರ ಸಡಗರ

## 2021ರ ಕೃಷಿಮೇಳದ ವೈವಿಧ್ಯತೆಯ ಮೆರಗು

**ಗಮನ ಸೆಳೆದ ಕೃಷ್ಣ ಹೋರಿ :** ಮಳವಳ್ಳಿಯ ಬೋರೇಗೌಡರಿಗೆ ಸೇರಿದ ಒಂದು ಕೋಟಿ ಮೌಲ್ಯದ ಕೃಷ್ಣ ಹೋರಿಯು ಬರೋಬ್ಬರಿ 800 ಕೆ.ಜಿ. ತೂಕವಿದ್ದು ರೈತರ ಗಮನ ಸೆಳೆದಿದೆ. ಇದರ ವೀರ್ಯಕ್ಕೆ ಬಹಳ ಬೇಡಿಕೆಯಿದ್ದು ಮಾರಾಟ ಘಟಕಗಳನ್ನು ತೆರೆಯಲಾಗಿದೆ ಎಂದು ಮಾಲೀಕರು ತಿಳಿಸಿದ್ದಾರೆ.

**ರೈತರ ಅನಿಸಿಕೆ :** ಚಾಮರಾಜನಗರದ ಶಿವಕುಮಾರ್‌ರವರು ತಿಳಿಸಿದಂತೆ ರೈತರಿಗೆ ಬೇಕಾಗುವ ಮಾಹಿತಿಯು ಒಂದೇ ಕಡೆ ಸಿಗುವ ಅವಕಾಶ ಹಾಗೂ ಹೊಸ ಪರಿಕರಗಳು ಮತ್ತು ಯಂತ್ರಗಳು ಲಭ್ಯವಿದ್ದು ಕೃಷಿಮೇಳಕ್ಕೆ ಮೆರಗು ನೀಡಿದೆಯೆಂದರು.

## ಕೃಷಿಮೇಳದ ವೀಕ್ಷಣೆ

**ಮೊದಲನೆಯ ದಿನ ಭೌತಿಕವಾಗಿ 60 ಸಾವಿರಕ್ಕಿಂತ ಹೆಚ್ಚು ಹಾಗೂ ಆನ್‌ಲೈನ್‌ನಲ್ಲಿ 1.5 ಲಕ್ಷ ಜನರು ವೀಕ್ಷಿಸಿದ್ದಾರೆ.**

**ಎರಡನೆಯ ದಿನ ಭೌತಿಕವಾಗಿ 1.7 ಲಕ್ಷಕ್ಕಿಂತ ಹೆಚ್ಚು ಹಾಗೂ ಆನ್‌ಲೈನ್‌ನಲ್ಲಿ 5.2 ಲಕ್ಷ ಜನರು ವೀಕ್ಷಿಸಿದ್ದಾರೆ.**

